ಮೈಸೂರ ಗೆಜೆಟ್.

ಸಂ. 44.] ಸರ್ಕಾರದಿಂದ ಪ್ರಾಯಿಷ್ ಆದ್ದು. [ನಂ. 39.

ಬೆಂಗಳೂರು, ಗುರುವಾರ, ಸೆಪ್ಟಂಬರ್ ತಾ॥ 30, ಸ॥ 1909.

III ನೆ ಭಾಗ.

ಲೆಜಿಸ್ಲೇಟಿವ್ ರೆಗ್ಯುಲೇಷನ್ಸುಗಳು ಮತ್ತು ಅವುಗಳಂತೆ ಆದ ನಿಬಂಧನೆಗಳು.

ಮೈಸೂರು ಮಹಾರಾಜರವರ ಗವರ್ನಮೆಂಟು

ಲೆಜಿಸ್ಲೇಟಿವ್ ಇಲಾಖೆ.

ತಾರೀಖು 16ನೆ ಸಪ್ಟಂಬರ್ 1909.

ನಂ. ರೆ. 2407—ಲ್ಯಾ. ರೆ. 258-0-1, ಸ॥ 1888ನೆ ಇಸವಿಯ ಲ್ಯಾಂಡ್ ರೆವಿನ್ಯೂ ಕೋಡಿನ 39ನೆ ಪ್ರಕರಣದ ಮೇರೆಗೆ, ವಿಶೇಷ ಕೆಲಸಗಳಿಗೋಸ್ಕರ ಜಮೀನುಗಳನ್ನು ವಿಂಗಡಿಸಿಡುವ ವಿಷಯದಲ್ಲಿಯೂ, ಹಾಗೆ ವಿಂಗಡಿಸಲ್ಪಟ್ಟ ಜಮೀನುಗಳನ್ನು ಉಪಯೋಗಿಸುವ ಅಥವಾ ಕೊಡುವ ವಿಷಯದಲ್ಲಿಯೂ ಸಹ ರೆವಿನ್ಯೂ ಕಮಿಷನರವರ ಅಧಿಕಾರವನ್ನು ನಿಷ್ಕರ್ಷೆ ಮಾಡುವುದಕ್ಕಾಗಿ ಮೈಸೂರು ಶ್ರೀಮನ್ ಮಹಾರಾಜಾ ಸಾಹೇಬ್ಬಹದ್ದೂರ್‌ರವರ ಸರ್ಕಾರದವರು ಸದರಿ ಲ್ಯಾಂಡ್ ರೆವಿನ್ಯೂ ಕೋಡಿನ 233ನೆ ಪ್ರಕರಣದಿಂದ ಕೊಡಲ್ಪಟ್ಟ ಅಧಿಕಾರಗಳನ್ನು ಚಲಾಯಿಸುವುದರಲ್ಲಿ ಇದರಡಿ ಕಂಡ ನಿಬಂಧನೆಯನ್ನು ವಿಧಿಸಿ, ಅದನ್ನು 1907ನೆ ಜನವರಿ 9ನೆ ಮರ್ಕುಂ ರೆ. 6732—ಲ್ಯಾ. ರೆ. 212-06-16ನೆ ನಂಬರ್ ಇಸ್ತಿಹಾರ್ನಾಮೆಯಲ್ಲಿ ಕೊಡಲ್ಪಟ್ಟ ನಿಬಂಧನೆಗಳ 11 (a) ನಿಬಂಧನೆಗೆ ಬದಲಾಗಿ ಸೇರಿಸತಕ್ಕದ್ದೆಂದು ಹುಕುಂ ಮಾಡುತ್ತಾರೆ :—

"11 (b) (i). ಜಂಗಲಿಗೋಸ್ಕರ ಜಮೀನುಗಳನ್ನು ಉಳಿಸಿಡತಕ್ಕ ಕೆಲಸವು (1900ನೆ ಇಸವಿಯ 11ನೆ ನಂಬರ್) ಮೈಸೂರು ಫಾರೆಸ್ಟ್ ರೆಗ್ಯುಲೇಷನ್‌ನಿಂದ ಕ್ರಮಪಟ್ಟಿರುವುದರಿಂದ, ಈ ಬಗ್ಯಾಗಿ ರೆವಿನ್ಯೂ ಕಮಿಷನರವರು ಯಾವ ಜಮೀನುಗಳನ್ನೂ ವಿಂಗಡಿಸಿಡಬೇಕಾದ ಅವಶ್ಯವಿಲ್ಲ.

(ii) ಸರ್ಕಾರಕ್ಕೆ ತೆಗೆದುಕೊಳ್ಳಲ್ಪಟ್ಟ ಜಮೀನುಗಳಿಗೆ ಸರ್ಕಾರದವರು ಕಂಪರ್ಸೇರ್ಷ ಕೊಡಬೇಕಾಗಿಲ್ಲದ ಸಂದರ್ಭದಲ್ಲಿ ಪ್ರೊವಿಷನ್ ಅಥವಾ ಲೋಕಲ್ ಫಂಡ್ ರಸ್ತೆಗಳಿಗೂ, ಪಾಠಶಾಲೆಗಳಿಗೂ ಮತ್ತು ಇತರ ಸರ್ಕಾರೀ ಕೆಲಸಗಳಿಗೂ ಸಹ ವಿಸ್ತೀರ್ಣದಲ್ಲಿ 50 ಎಕರೆಗಳಿಗೆ ಮೀರದೆಯೂ ಬಜಾರ್ ಖರೀದಿಯಲ್ಲಿ 100 ರೂಪಾಯಿಗೆ ಮೀರದೆಯೂ ಮತ್ತು ಕಂದಾಯ ದಾಖಲಾಗದೆಯೂ ಇರುವ ಬಂಜರು ಜಮೀನನ್ನು ಉಪಯೋಗಿಸಿಕೊಳ್ಳುವಂತೆ ಮಂಜೂರ್ಮಾಡುವ ಬಗ್ಯೆ ರೆವಿನ್ಯೂ ಕಮಿಷನರವರಿಗೆ ಅಧಿಕಾರ ಕೊಟ್ಟಿರುತ್ತದೆ. ಹಾಗೆ ಬೇರೆ ಉದ್ದೇಶಕ್ಕಾಗಿ ಉಪಯೋಗಿಸಿಕೊಳ್ಳುವಂತೆ ರೆವಿನ್ಯೂ ಕಮಿಷನರವರು ಮಂಜೂರ್ಮಾಡಿದ ಜಮೀನುಗಳ ಲೆಕ್ಕವನ್ನು ಆರು ತಿಂಗಳಿಗೆ ಒಂದಾವರ್ತಿ ಅವರು ಸರ್ಕಾರಕ್ಕೆ ಕಳುಹಿಸತಕ್ಕದ್ದು.

(iii) ಹಾಗೆ ಪ್ರತ್ಯೇಕವಾಗಿ ವಿಂಗಡಿಸಿಡುವ ಬಗ್ಯೆ ಕಂದಾಯ ದಾಖಲಾಗದೇ ಇರುವ ಜಮೀನು ಇನ್ನೂ ಹೆಚ್ಚಾಗಿ ಬೇಕಾದರೂ ಅಥವಾ ಕಂದಾಯ ಕಾರಾವಾದ ಜಮೀನು ಎಷ್ಟೇ ವಿಸ್ತೀರ್ಣವುಳ್ಳದ್ದು ಬೇಕಾದರೂ ಪೂರ್ವಭಾವಿಯಾಗಿ ಸರ್ಕಾರದವರ ಮಂಜೂರಾತಿಯನ್ನು ಪಡೆಯಬೇಕು.

(iv) ಸರ್ಕಾರದವರ ಮಂಜೂರಾತಿನಿಶಿ ಫಲಾನೆ ಉದ್ದೇಶಕ್ಕೋಸ್ಕರ ಕೊಡಲ್ಪಟ್ಟ ಜಮೀನುಗಳನ್ನು ಬೇರೆ ಉದ್ದೇಶಕ್ಕೆ ಉಪಯೋಗಿಸಬೇಕಾದ ಸಂದರ್ಭದಲ್ಲಿಯೂ ಕೂಡ ಅದೇ ರೀತಿಯಾಗಿ ಸರ್ಕಾರದವರ ಮಂಜೂರಾತಿಯನ್ನು ಪೂರ್ವಭಾವಿಯಾಗಿ ಪಡೆಯಬೇಕು.

ಹುಕುಂ ಬಮೋಜೇಬ್,

ಕೆ. ಎಸ್. ಚಂದ್ರಶೇಖರ ಐಯ್ಯರ್,

ಜನರಲ್ ಮತ್ತು ರೆವಿನ್ಯೂ ಇಲಾಖೆಗಳ ಸೆಕ್ರಿಟರಿ.